# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1298
02. ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ, ಸ್ಥಳೀಯ ಸಂಸ್ಥೆಗಳ ಕ್ಷೇತ್ರ
03. ಉತ್ತರಿಸುವ ದಿನಾಂಕ : 21.12.2018
04. ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯವು ಮಾಹಿತಿ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿದ್ದರೂ ಈ ತಂತ್ರಜ್ಞಾನದ ಫಲಗಳು ಜನರಿಗೆ ಅನುಕೂಲವಾಗುವುದರೊಂದಿಗೆ ಸಾಕಷ್ಟು ಅನಾನುಕೂಲತೆ ತಂದೊಡ್ಡಿದ್ದು ಸೈಬರ್ ಕ್ರೈಂ ಆನ್‌ಲೈನ್ ವಂಚನೆ ಹೆಚ್ಚಳವಾಗಿದ್ದು, ಅದನ್ನು ನಿಯಂತ್ರಿಸುವಲ್ಲಿ ಸರ್ಕಾರ ವಿಫಲವಾಗಿರುವುದು ನಿಜವೇ; | ಸೈಬರ್ ಕ್ರೈಂ, ಆನ್‌ಲೈನ್ ವಂಚನೆಗಳನ್ನು ತಡೆಯಲು ರಾಜ್ಯದಲ್ಲಿ 8 ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲೆಗೆ ಒಂದರಂತೆ ಸೈಬರ್, ಆರ್ಥಿಕ ಮತ್ತು ಮಾದಕ ದ್ರವ್ಯ ಅಪರಾಧ ಪೊಲೀಸ್ ಠಾಣೆಗಳು (ಸಿಇಎನ್) ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದು, ಈ ಪೊಲೀಸ್ ಠಾಣೆಗಳಲ್ಲಿಯೂ ಸೈಬರ್ ಕ್ರೈಂ ಮತ್ತು ಆನ್‌ಲೈನ್ ವಂಚನೆಗಳ ಬಗ್ಗೆ ದೂರು ಬಂದ ತಕ್ಷಣ ಪ್ರಕರಣಗಳನ್ನು ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಲಾಗುತ್ತಿದ್ದು, ಸರ್ಕಾರವು ಸಮರ್ಥವಾಗಿ ಇಂತಹ ಪ್ರಕರಣಗಳ ತನಿಖೆಯನ್ನು ನಡೆಸುತ್ತಿದೆ. |
| ಆ) | ರಾಜ್ಯದಲ್ಲಿ ಆನ್‌ಲೈನ್ ವ್ಯವಹಾರಗಳು ಹೆಚ್ಚಾದಂತೆ, ಸೈಬರ್ ಕ್ರೈಂಗಳು, ಆನ್‌ಲೈನ್ ವಂಚನೆಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. ದಾಖಲಾದ ಪ್ರಕರಣಗಳನ್ನು ಪತ್ತೆ ಮಾಡಲು ಮತ್ತು ನಿಯಂತ್ರಿಸಲು ಕ್ರಮ ಜರುಗಿಸಲಾಗುತ್ತಿದೆ. |
| ಇ) | ಹಾಗಿದ್ದಲ್ಲಿ, ಆನ್‌ಲೈನ್ ವಂಚನೆಗೊಳಗಾದ ಶೋಷಿತರು ಪೊಲೀಸರಿಗೆ ದೂರು ಸಲ್ಲಿಸಲು ಠಾಣೆಯಿಂದ ಠಾಣೆಗೆ ಅಲೆದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸೈಬರ್ ಕ್ರೈಂ ಆನ್‌ಲೈನ್ ವಂಚನೆ ಪ್ರಕರಣಗಳನ್ನು ದಾಖಲಿಸಿ ತನಿಖೆ ಮಾಡಲು ರಾಜ್ಯದಲ್ಲಿ 1) ಸಿಐಡಿ ಘಟಕ ಬೆಂಗಳೂರು,<br>2) ಬೆಂಗಳೂರು ನಗರ (ಪೊಲೀಸ್ ಆಯುಕ್ತರ ಕಛೇರಿ),<br>3) ಬೆಂಗಳೂರು (ಕೇಂದ್ರ ವಲಯ), 4) ಮೈಸೂರು,<br>5) ದಾವಣಗೆರೆ, 6) ಧಾರವಾಡ, 7) ಕಲಬುರಗಿ,<br>8) ಮಂಗಳೂರು ನಲ್ಲಿ ಸೈಬರ್ ಕ್ರೈಂ ಪೊಲೀಸ್ ಠಾಣೆಯನ್ನು ತೆರೆಯಲಾಗಿರುತ್ತದೆ.<br>ರಾಜ್ಯದಲ್ಲಿ ಜಿಲ್ಲೆಗೆ ಒಂದರಂತೆ ಸೈಬರ್, ಆರ್ಥಿಕ ಮತ್ತು ಮಾದಕ ದ್ರವ್ಯ ಅಪರಾಧ (ಸಿಇಎನ್) ಪೊಲೀಸ್ ಠಾಣೆಗಳನ್ನು ತೆರೆಯಲಾಗಿದ್ದು, ವಂಚನೆಗೆ ಒಳಗಾದ ಶೋಷಿತರು ಈ ಪೊಲೀಸ್ ಠಾಣೆಗಳು ಹಾಗೂ ತಮ್ಮ ಸ್ಥಳೀಯ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲಿಯೂ ಸಹ ದೂರುಗಳನ್ನು ದಾಖಲು ಮಾಡಬಹುದಾಗಿದೆ. |
| ಈ) | ಸೈಬರ್ ಕ್ರೈಂಗಳನ್ನೇ ನೋಡಿಕೊಳ್ಳಲು ಮತ್ತು ಅವುಗಳನ್ನು ನಿರ್ವಹಿಸಲು ಸರ್ಕಾರವು ಪ್ರತ್ಯೇಕ ನುರಿತ ತಜ್ಞರ ಪೊಲೀಸ್ ಪಡೆಯನ್ನು ಸೃಷ್ಟಿಸಿದೆಯೇ; ಎಲ್ಲಿ ದೂರುಗಳನ್ನು ಸ್ವೀಕರಿಸುತ್ತಾರೆ; ಆನ್‌ಲೈನ್‌ನಲ್ಲಿಯೇ ದೂರು ನೀಡಬಹುದೆ ಇದರ ಬಗ್ಗೆ ಸಾಮಾನ್ಯ ಸಾರ್ವಜನಿಕರಿಗೆ ಸೂಕ್ತ ಮಾಹಿತಿ ನೀಡಲು ಸರ್ಕಾರವು ಏನು ಕ್ರಮ ಕೈಗೊಂಡಿದೆ? (ವಿವರ ನೀಡುವುದು) | ಸೈಬರ್ ಅಪರಾಧಗಳ ಕುರಿತಂತೆ ರಾಜ್ಯದ ಎಲ್ಲಾ ಜಿಲ್ಲೆಗೆ ಒಂದರಂತೆ ಸೈಬರ್, ಆರ್ಥಿಕ ಮತ್ತು ಮಾದಕ ದ್ರವ್ಯ ಅಪರಾಧ ಪೊಲೀಸ್ ಠಾಣೆ(ಸಿಇಎನ್) ಈಗಾಗಲೇ ಕಾರ್ಯಾಚರಿಸುತ್ತಿದ್ದು, ಈ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಸೈಬರ್ ಅಪರಾಧಗಳ ಕುರಿತಂತೆ ಮೂಲ ತರಬೇತಿಯನ್ನು ನೀಡಲಾಗಿದ್ದು, ಹೆಚ್ಚಿನ ತನಿಖೆಯ ಸಲುವಾಗಿ ರಾಜ್ಯ ಮಟ್ಟದ ಸೈಬರ್ ಅಪರಾಧ ವಿಭಾಗದಲ್ಲಿ ಇಬ್ಬರು ತಾಂತ್ರಿಕ ತಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು. ವಿಶೇಷ ಪ್ರಕರಣಗಳಲ್ಲಿ ತಜ್ಞರುಗಳ ಸಹಾಯವನ್ನು ಪಡೆದು ಕ್ರಮ ಜರುಗಿಸಲಾಗುತ್ತಿದೆ.<br>ಆರ್ಥಿಕ ಅಪರಾಧದ ಬಗ್ಗೆ ದಿನಾಂಕ:11/10/2018 ರಂದು ಪೊಲೀಸ್ ಪ್ರಧಾನ ಕಛೇರಿಯಲ್ಲಿ ಕಾರ್ಯಗಾರವನ್ನು ನಡೆಸಿ ತನಿಖಾಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲಾಗಿದೆ, ಸಾರ್ವಜನಿಕರು ಸೈಬರ್ ಅಪರಾಧಗಳ ಕುರಿತಂತೆ ತಮ್ಮ |

<table>
<tr>
<td></td>
<td></td>
<td>ಹತ್ತಿರದ ಪೊಲೀಸ್ ಠಾಣೆಯಲ್ಲಿ ಲಿಖಿತ ದೂರನ್ನು ನೀಡಬಹುದಾಗಿದ್ದು, ಆನ್‌ಲೈನ್ ಮೂಲಕವೂ ದೂರನ್ನು ನೀಡಬಹುದಾಗಿರುತ್ತದೆ. ಈ ಬಗ್ಗೆ ಸಾರ್ವಜನಿಕ ಅಪರಾಧ ಸಭೆಗಳಲ್ಲಿ, ಸಿಟಿಜನ್ ಕಮಿಟಿ ಮೀಟಿಂಗ್, ಮೊಹಲ್ಲಾ ಮೀಟಿಂಗ್ ಹಾಗೂ ಅಪರಾದ ತಡೆ ಮಾಸಾಚರಣೆಯ ಸಮಯಗಳಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡಲಾಗುತ್ತಿದೆ.</td>
</tr>
<tr>
<td>ಉ)</td>
<td>ಈಗಾಗಲೇ ಇಂತಹ ಎಷ್ಟು ಪ್ರಕರಣಗಳು ವರದಿಯಾಗಿವೆ; ಎಷ್ಟು ಪ್ರಕರಣಗಳಲ್ಲಿ ವಂಚಕರಿಗೆ ಶಿಕ್ಷೆಯಾಗಿದೆ; ಇಂತಹ ಪ್ರಕರಣಗಳಿಗೆ ಕಡಿವಾಣ ಹಾಕಲು ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಂಡಿದೆ? (ವಿವರ ನೀಡುವುದು)</td>
<td>ಕಳೆದ ಮೂರು ವರ್ಷಗಳಲ್ಲಿ ಆನ್‌ಲೈನ್ ವಂಚನೆ, ಸೈಬರ್ ಅಪರಾಧಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳು ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ದಾಖಲಾದ ಪ್ರಕರಣಗಳು</th><th>ಶಿಕ್ಷೆಯಾದ ಪ್ರಕರಣಗಳು</th></tr>
<tr><td>2016</td><td>1077</td><td>00</td></tr>
<tr><td>2017</td><td>2993</td><td>00</td></tr>
<tr><td>2018 (ನವಂಬರ್ ವರೆಗೆ)</td><td>5512</td><td>02</td></tr>
</table>
<u>ಸರ್ಕಾರವು ಕೈಗೊಂಡ ಕ್ರಮಗಳು.</u>
<ul>
<li>ಸೈಬರ್ ಕ್ರೈಂ ಮತ್ತು ಆನ್‌ಲೈನ್ ವಂಚನೆ ಪ್ರಕರಣಗಳ ಕುರಿತಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಅಪರಾಧ ತಡೆ ಮಾಸಾಚರಣೆ ಆಚರಿಸುವ ಮೂಲಕ ಕ್ರಮ ಕೈಗೊಳ್ಳಲಾಗಿರುತ್ತದೆ.</li>
<li>ಸಾರ್ವಜನಿಕ ಅಪರಾಧ ಸಭೆಗಳಲ್ಲಿ, ಸಿಟಿಜನ್ ಕಮಿಟಿ ಮೀಟಿಂಗ್, ಮೊಹಲ್ಲಾ ಮೀಟಿಂಗ್ ಹಾಗೂ ಅಪರಾದ ತಡೆ ಮಾಸಾಚರಣೆಯ ಸಮಯಗಳಲ್ಲಿ ಸಾರ್ವಜನಿಕರಿಗೆ ಆನ್‌ಲೈನ್ ವಂಚನೆ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.</li>
<li>ಹಾಗೂ ಪತ್ರಿಕೆಗಳಲ್ಲಿ, ಮಾಧ್ಯಮಗಳ ಮೂಲಕ ಸಾರ್ವಜನಿಕ ಸ್ಥಳಗಳಲ್ಲಿ ಭಿತ್ತಿಪತ್ರಗಳನ್ನು ಹಂಚುವ ಹಾಗೂ ಬ್ಯಾನರ್‌ಗಳನ್ನು ಅಳವಡಿಸುವ ಮೂಲಕ ಸೈಬರ್ ವಂಚನೆ ಕುರಿತು ಅರಿವು ಮೂಡಿಸಲಾಗುತ್ತಿದೆ.</li>
<li>ಬ್ಯಾಂಕ್ ಮುಖ್ಯಸ್ಥರುಗಳೊಂದಿಗೆ ಸಮಾಲೋಚನೆ ನಡೆಸಿ ಗ್ರಾಹಕರು ತಮ್ಮ ಬ್ಯಾಂಕ್ ಖಾತೆ ಸಂಖ್ಯೆಯನ್ನು ಮತ್ತು ಎ.ಟಿ.ಎಂ ಸಂಖ್ಯೆ ಹಾಗೂ ಪಿನ್ ಸಂಖ್ಯೆಯನ್ನು ಯಾರೊಂದಿಗೂ ಹಂಚಿಕೊಳ್ಳದಿರುವಂತೆ ಮೊಬೈಲ್ ಮೂಲಕ ಎಸ್.ಎಂ.ಎಸ್ ಸಂದೇಶ ಕಳುಹಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.</li>
<li>ಸೈಬರ್ ಅಪರಾಧಗಳ ಬಗ್ಗೆ ಭಾರತ ಸರ್ಕಾರದ ಗೃಹ ಮಂತ್ರಾಲಯವು ಸಾರ್ವಜನಿಕರಿಗೆ ಅರಿವು ಮೂಡಿಸುವ ಬಿತ್ತಿ ಪತ್ರಗಳು, ಮಾದ್ಯಮಗಳಲ್ಲಿ ಪ್ರಚಾರ ಮಾಡಲು ಅಭಿವೃದ್ಧಿ ಪಡಿಸಿರುವ ಪ್ರಚಾರ ಪತ್ರಗಳ ವಿನ್ಯಾಸಗಳು ಅವರ ಅಧಿಕೃತ ವೆಬ್‌ಸೈಟಿನಲ್ಲಿ ಲಭ್ಯವಿದ್ದು ಅವುಗಳನ್ನು ಉಪಯೋಗಿಸುವಂತೆ ಪ್ರಸ್ತುತ ಸಾರ್ವಜನಿಕರಿಗೆ ಅಪರಾಧ ತಡೆ ಮಾಸಾಚರಣೆಯ ವೇಳೆಯಲ್ಲಿ ತಿಳಿಸಲಾಗಿದೆ.</li>
</ul>
</td>
</tr>
</table>

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ